

ಆರ್ಟೆಮಿಸ್ ದೇವತೆಗೆ ಮೀಸಲಾಗಿರುವ ದೇವಾಲಯ

## ಓವಲ್ ಪ್ಲಾಜಾ

ಟಿಕೆಟ್ ಕೊಂಡು ಒಳಗೆ ಕಾಲಿಟ್ಟೊಡನೆ ಪ್ರವಾಸಿಗರಿಗೆ ಸ್ವಾಗತ ಕೋರುವುದು ಈ ಹೆಡ್ರಿಯನ್ ಆರ್ಚ್. ಕ್ರಿ.ಶ 2ನೇ ಶತಮಾನದ ಹೊತ್ತಿಗೆ ರೋಮ್‌ನ ದೊರೆ ಹೆಡ್ರಿಯನ್ ಇಲ್ಲಿಗೆ ಬಂದಿದ್ದನಂತೆ. ಆ ದಿನದ ಸ್ಮರಣಾರ್ಥವಾಗಿ ಹೆಡ್ರಿಯನ್ ಆರ್ಚ್ ಕಟ್ಟಲಾಯಿತು. ಆ ಪುರಾತನ ನಗರದ ದಕ್ಷಿಣ ಗಡಿಯೂ ಇದಾಗಿತ್ತು. ಪಕ್ಕದಲ್ಲೇ ಇರುವ ಹಿಪ್ಪೋಡ್ರೋಮ್ ಎಂಬ ಬೃಹತ್ ಕ್ರೀಡಾಂಗಣ, ಕುದುರೆ ಓಟಕ್ಕೆ ಪ್ರಸಿದ್ಧಿ. ಇಲ್ಲಿ ಅಂಗಣದ ಸುತ್ತಲೂ ನೂರಾರು ಜನರು ಕುಳಿತು ಕುದುರೆ ಜೂಜನ್ನು ವೀಕ್ಷಿಸಬಹುದಿತ್ತು. ಹೆಡ್ರಿಯನ್ ಆರ್ಚ್, ಹಿಪ್ಪೋಡ್ರೋಮ್ ನೋಡಿಕೊಂಡು ಮುನ್ನಡೆದರೆ ಎದುರಾಗುವುದು ಓವಲ್ ಪ್ಲಾಜಾ. ಇದು ಇಲ್ಲಿನ ಮುಖ್ಯ ಆಕರ್ಷಣೆ. ಸುಮಾರು 160 ಕಂಬಗಳು ಆ ವೃತ್ತವನ್ನು ಸುತ್ತುವರೆದಿದ್ದು ಕಣ್ಮನ ಸೆಳೆಯುತ್ತದೆ. ನೆಲಕ್ಕೆ ಸುಣ್ಣದಕಲ್ಲಿನ ಹೊದಿಕೆ. ಹಿಂದೆ ಈ ಪ್ಲಾಜಾ ಮಾರುಕಟ್ಟೆಯಾಗಿತ್ತಲ್ಲದೆ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವೂ ಆಗಿತ್ತು.

ಅಲ್ಲಿ ಎಡಕ್ಕಿರುವ ಏರಾದ ದಾರಿ ಹಿಡಿದರೆ ಕ್ರಿ.ಶ. 1ನೇ ಶತಮಾನದಲ್ಲಿ ಕಟ್ಟಲಾದ ಸುಂದರವಾದ ಆಂಫಿಥಿಯೇಟರ್ ಸಿಗುತ್ತದೆ. ಇದರಲ್ಲಿ ಸುಮಾರು 5000 ಜನರು ಒಟ್ಟಿಗೆ ಕುಳಿತು ನೋಡಬಹುದಾದಂತಹ ಆಸನಗಳ ವ್ಯವಸ್ಥೆ ಇತ್ತು. ಅಲ್ಲಿಂದ ನಿಂತು ನೋಡಿದರೆ ಓವಲ್ ಪ್ಲಾಜಾದ ಅಪರೂಪದ ಪಕ್ಷಿನೋಟ ಕಾಣಸಿಗುತ್ತದೆ.

ಆ ಪುರಾತನ ನಗರಿಯ ಮುಖ್ಯ ಕಟ್ಟಡಗಳನ್ನು ಬೆಸೆಯುವುದಕ್ಕೆಂದೇ ನಿರ್ಮಿತವಾದ ರಸ್ತೆ ಕಾರ್ಡೋ ಮ್ಯಾಕ್ಸಿಮಸ್. ಇದರ ಇಕ್ಕೆಲಗಳಲ್ಲೂ ಎತ್ತರವಾದ ಕಂಬಗಳಿದ್ದು ಅದರಾಚೆಗೆ ಮಾರುಕಟ್ಟೆ, ದೇವಾಲಯಗಳು, ಆಂಫಿಥಿಯೇಟರ್‌ಗಳನ್ನು ಕಾಣಬಹುದು. ಓವಲ್ ಪ್ಲಾಜಾ ದಾಟಿ ಕಾರ್ಡೋ ಮ್ಯಾಕ್ಸಿಮಸ್ ರಸ್ತೆಯಲ್ಲಿ ಮುಂದುವರಿದರೆ 'ಅಗೋರ' ಎಂಬ ಹೆಸರಿನ ಕಟ್ಟಡ ಸಿಗುತ್ತದೆ. ಹಿಂದೆ ಜನರು ಸಭೆ ಸೇರಲು ಇದನ್ನು ಬಳಸುತ್ತಿದ್ದರೆನ್ನಲಾಗಿದೆ, ಅದರ ಮಧ್ಯೆ ಇರುವ ಕಾರಂಜಿ ಅಲ್ಲಿನ ಮುಖ್ಯ ಆಕರ್ಷಣೆ.

ಇನ್ನೂ ಮುಂದುವರೆದರೆ ಬಹಳಷ್ಟು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದದು ಆರ್ಟೆಮಿಸ್ ದೇವತೆಗೆ ಮೀಸಲಾಗಿರುವ ದೇವಾಲಯ. ಅಲ್ಲಿ ಕೋರಿಂಥಿಯನ್ ಮಾದರಿಯಲ್ಲಿ ನಿಲ್ಲಿಸಿದ್ದ ಹನ್ನೆರಡು ಕಂಬಗಳಲ್ಲಿ ಹನ್ನೊಂದು ಕಂಬಗಳನ್ನು ಇಂದಿಗೂ ಕಾಣಬಹುದು. ಮುಂದೆ ಮತ್ತೊಂದು ಚಿಕ್ಕ ಆಂಫಿಥಿಯೇಟರ್ ಇದ್ದು ಅದು ಸರ್ಕಾರಿ ಕೆಲಸಗಳಿಗೆ ಬಳಕೆಯಾಗುತ್ತಿತ್ತು. ಇದಲ್ಲದೆ ಅಲ್ಲೊಂದು ಚಿಕ್ಕ ವಸ್ತು ಸಂಗ್ರಹಾಲಯವೂ ಇದೆ. ನಿಧಾನವಾಗಿ ಇವಿಷ್ಟನ್ನು ನೋಡಿ ಬರಲು ಕನಿಷ್ಠ ಎರಡು ಮೂರು ಗಂಟೆಗಳು ಬೇಕಾದೀತು.

ಆ ಪುರಾತನ ನಗರಿಯ ಉದ್ದಗಲಕ್ಕೂ ಓಡಾಡಿ ಹೊರಬಂದಾಗ ಗಂಟೆ ನಾಲ್ಕು ಸಮೀಪಿಸಿತ್ತು. ಕತ್ತಲಾದ ಮೇಲೆ ಬಸ್ಸುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ ಎಂದು ಕೇಳಿ ತಿಳಿದಿದ್ದ ನಾವು ಆದಷ್ಟು ಬೇಗ ಅಮ್ಮಾನ್‌ಗೆ ವಾಪಸಾಗಬೇಕೆಂಬ ಆತುರದಲ್ಲಿದ್ದೆವು. ಅದೇ ಸಮಯಕ್ಕೆ ಕಾಯುತ್ತಿದ್ದ ಟ್ಯಾಕ್ಸಿ ಚಾಲಕರು ನಮ್ಮ ಬೆನ್ನುಹತ್ತಿದರು. 'ಕೊನೆಯ ಬಸ್ ಆಗಲೇ ಹೊರಟುಹೋಗಿದೆ' ಎಂಬ ಸುಳ್ಳು ಬೇರೆ. ಆದರೂ ನಾವು ಬಸ್ ಸ್ಟಾಂಡ್‌ಗೆ ಹೋಗಿಯೇ ನೋಡುತ್ತೇವೆ ಎಂದು ಹೇಳಿ ಬಸ್ ನಿಲ್ದಾಣ ತಲುಪಿದೆವು. ಅಲ್ಲಿ ಅಮ್ಮಾನ್‌ಗೆ ಹೊರಡುವ ಮಿನಿ ಬಸ್ ಖಾಲಿಯಾಗಿ ನಿಂತಿತ್ತು. ಒಳಗೆ ಕುಳಿತವರು ನಾವಿಬ್ಬರೇ. ಯಥಾಪ್ರಕಾರ ಇಡೀ ಬಸ್ ತುಂಬಿಕೊಳ್ಳುವವರೆಗೂ ಕಾದು, ಕೊನೆಗೆ ನಮ್ಮ ಗಾಡಿ ಜೆರಾಶ್ ಬಿಟ್ಟು ಹೊರಡುವಷ್ಟರಲ್ಲಿ ಸೂರ್ಯ ಬಾನಂಚಿನಲ್ಲಿ ಮುಳುಗಿಹೋಗಿದ್ದ. ■